**<u>ದಿನಾಂಕ: 14-12-2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು</u>**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | **ಕೌನ್ಸಿಲ್ ಕಾರ್ಯದರ್ಶಿ** |
| 2 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 3 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | 3 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 4 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 4 | ವಲಯ ಅರಣ್ಯಾಧಿಕಾರಿಗಳು-**(ಪೂರ್ವ/ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 5 | ಶ್ರೀ.ಎನ್.ಚಂದ್ರಶೇಖರ್‌ರಾಜು | ಸದಸ್ಯರು | 5 | |
| 6 | ಶ್ರೀ.ಎಸ್.ಗಂಗಾಧರ್ | ಸದಸ್ಯರು | 6 | ಕಾ.ಪಾ.ಅ.(ಯೋಜನೆ-ಕೆರೆಗಳು)&(ಕೆರೆಗಳು-ಪರಿಸರ ಕೋಶ 1,2,3,4,5,) |
| 7 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | 7 | ತೋಟಗಾರಿಕೆ ಅಧೀಕ್ಷಕರು - **(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)** |
| 8 | ಶ್ರೀ.ಎಮ್.ಶಿವರಾಜು | ಸದಸ್ಯರು | | |
| 9 | ಶ್ರೀಮತಿ.ಸರಳ | ಸದಸ್ಯರು | 8 | ಕಾ.ಪಾ.ಅ.(ಯೋಜನೆ - **(ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 10 | ಶ್ರೀ.ತಿಮ್ಮರಾಜು | ಸದಸ್ಯರು | | |
| 11 | ಶ್ರೀಮತಿ.ಲಕ್ಷ್ಮಿ | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

*ಉದ್ಯಾನವನಗಳ ನಿರ್ವಹಣೆಯ ಕಡತಗಳ ಸ್ಥಿರೀಕರಣದ ಬಗ್ಗೆ ಮತ್ತು 2012-13ನೇ ಸಾಲಿನ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಮಾನ್ಯ ಆಯುಕ್ತರ ಮುಖೇನ ಸಮಿತಿಗೆ ಮಂಡಿಸಿ ಅನುಮೋದನೆ ಪಡೆಯುವಂತೆ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.*

*ಪಾಲಿಕೆಯ ವಲಯ ವ್ಯಾಪ್ತಿಯಲ್ಲಿ ಒಬ್ಬ ಗುತ್ತಿಗೆದಾರರು ಎಷ್ಟು ಉದ್ಯಾನವನಗಳನ್ನು ನಿರ್ವಹಣೆ ಮಾಡುತ್ತಿದ್ದಾರೆ ಮತ್ತು ಅದಕ್ಕೆ ಸಂಬಂಧಪಟ್ಟ ವೆಚ್ಚದ ವಿವರಗಳನ್ನು ಸಮಿತಿಗೆ ಒದಗಿಸುವಂತೆ ಪತ್ರ ಮುಖೇನ ಕೋರಿದ್ದು, ಸ್ಪಷ್ಟವಾದ ವಿವರಗಳನ್ನು ತಯಾರಿಸಿ ಸಮಿತಿಗೆ ಒದಗಿಸಲು ಸೂಚಿಸಿದರು.*

**ಅಧ್ಯಕ್ಷರು,** ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

ಮುಂದುವರೆದಿದೆ. . . .

1. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/26/12–13, ದಿನಾಂಕ:17–11–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ.153, ಸರ್.ಎಂ.ಎನ್.ಕೃಷ್ಣರಾವ್ ಉದ್ಯಾನವನದಲ್ಲಿ ಅಂಗವಿಕಲ ಮಕ್ಕಳಿಗಾಗಿ ದಿನಾಂಕ:26–11–2012 ರಂದು PAINTING COMPETITION ನಡೆಸಲು ಅನುಮತಿ ನೀಡಲು M/S INFORMATION AND RESOURSE CENTRE, BANGALORE, ಇವರು ಅನುಮತಿ ಕೋರಿರುತ್ತಾರೆ.

ಸರ್.ಎಂ.ಎನ್.ಕೃಷ್ಣರಾವ್ ಉದ್ಯಾನವನದಲ್ಲಿ ಅಂಗವಿಕಲ ಮಕ್ಕಳಿಗಾಗಿ ದಿನಾಂಕ:26–11–2012 ರಂದು PAINTING COMPETITION ನಡೆಸಲು M/S INFORMATION AND RESOURSE CENTRE, BANGALORE. ರವರಿಗೆ ಅನುಮತಿ ನೀಡುವ ಬಗ್ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:11–11–2012 ರ ಟಿಪ್ಪಣಿ.

<u>ನಿರ್ಣಯ :–</u> **ದಿನಾಂಕ:11–11–2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

2. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/27/12–13, ದಿನಾಂಕ:24–11–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.129 ರ ವ್ಯಾಪ್ತಿಯಲ್ಲಿನ ಉದ್ಯಾನವನಗಳಿಗೆ ತಂತಿಬೇಲಿ ನಿರ್ಮಾಣ ಕಾಮಗಾರಿಗಳಿಗೆ ಅನುಮೋದನೆ ಪಡೆಯಲು ಶ್ರೀ.ಗೋವಿಂದರಾಜು, ವಾರ್ಡ್ ಸಂಖ್ಯೆ.129, ಬಿ.ಬಿ.ಎಂ.ಪಿ. ಸದಸ್ಯರು ಕೋರಿರುತ್ತಾರೆ.

ಅದರಂತೆ, ರಾಜರಾಜೇಶ್ವರಿನಗರ ವಲಯ ವಾರ್ಡ್ ಸಂಖ್ಯೆ.129 ರ ವ್ಯಾಪ್ತಿಯಲ್ಲಿನ ಉದ್ಯಾನವನಗಳಿಗೆ ತಂತಿಬೇಲಿ ಅಳವಡಿಸಲು 2012–13ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ಅಭಿವೃದ್ಧಿ ಅಡಿಯಲ್ಲಿ ಬರುವ <u>'ಪಾಲಿಕೆ ಆಸ್ತಿ ಸಂರಕ್ಷಣೆ ಪಿ–0290'</u> ಲೆಕ್ಕಶೀರ್ಷಿಕೆಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಒಟ್ಟು ಆರು ಕಾಮಗಾರಿಗಳನ್ನು ರೂ.94.60 ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:22–11–2012 ರ ಟಿಪ್ಪಣಿ.

<u>ನಿರ್ಣಯ :–</u> **ದಿನಾಂಕ:22–11–2012 ರ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪುವುದು ಹಾಗೂ ಸದರಿ ಕಾಮಗಾರಿಗಳನ್ನು ಕೆ.ಆರ್.ಡಿ.ಐ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

ಮುಂದುವರೆದಿದೆ. . . .

3. <u>**ವಿಷಯ ಸಂಖ್ಯೆ:ತೋ/ಸ್ಥಾ/ಸ/28/12-13, ದಿನಾಂಕ:26-11-2012**</u>

ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯವರು ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಲ್ಸ್ ಮತ್ತು ಮೀಡಿಯನ್ಸ್ ಸ್ಥಳಗಳಲ್ಲಿ ಸ್ವಂತ ವೆಚ್ಚದಲ್ಲಿ ಭೂ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಲು **ಈ ಕೆಳಕಂಡ ಸ್ಥಳಗಳನ್ನು ಐದು ವರ್ಷದ ಅವಧಿಗೆ ಹಂಚಿಕೆ** ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ.

1. ಬ್ರಿಗೇಡ್ ಡಯಾಗನಲ್ ರಸ್ತೆ ವೃತ್ತ,
2. ಚಾಲುಕ್ಯ ಹೋಟೆಲ್ ಮುಂಭಾಗ ವೃತ್ತ,
3. ರೇಸ್ ಕೋರ್ಸ್ ರಸ್ತೆ, ಜನತಾದಳ ಕಛೇರಿ ಮುಂಭಾಗ ವೃತ್ತ,
4. ಅಮ್ಮಣ್ಣಿ ಕಾಲೇಜ್ ಎದುರು ಮಲ್ಲೇಶ್ವರಂ ವೃತ್ತ
5. ಮರಿಯಮ್ಮ ದೇವಸ್ಥಾನ ಎದುರು, ಶಿವಾಜಿನಗರ ವೃತ್ತ,
6. ಮೇಖ್ರಿ ಸರ್ಕಲ್ ಅಂಡರ್ ಪಾಸ್ ವೃತ್ತ

ಈ ಸಂಬಂಧ ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯವರಿಗೆ ಮೇಲ್ಕಂಡ ಸ್ಥಳಗಳಲ್ಲಿ ಯಾವುದೇ ರೀತಿಯ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಲು ಅವಕಾಶ ನೀಡದೇ ಹಾಗೂ ಸದರಿ ಸ್ಥಳಗಳಲ್ಲಿ ಪಾಲಿಕೆಯ ಮತ್ತು ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯ ಹೆಸರನ್ನು ಒಳಗೊಂಡ ನಾಮಫಲಕಗಳನ್ನು ಅಳವಡಿಸಿ ತಮ್ಮ ಸ್ವಂತ ವೆಚ್ಚದಲ್ಲಿ ಭೂ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಲು ಐದು ವರ್ಷದ ಅವಧಿಗೆ ಅನುಮತಿ ನೀಡುವ ಸಂಬಂಧ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 13-11-2012 ರ ಟಿಪ್ಪಣಿ.

**<u>ನಿರ್ಣಯ</u> :- ಸ್ಥಳ ಪರಿಶೀಲನೆಗಾಗಿ ಮುಂದೂಡಲಾಗಿದೆ.**

4. <u>**ವಿಷಯ ಸಂಖ್ಯೆ:ತೋ/ಸ್ಥಾ/ಸ/29/12-13, ದಿನಾಂಕ:11-12-2012**</u>

ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.127, ಮೂಡಲಪಾಳ್ಯ ವ್ಯಾಪ್ತಿಯಲ್ಲಿ ಬರುವ ಕಲ್ಯಾಣನಗರ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಾಗಿ 2010-11ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಅನ್ವಯ ರೂ.2.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ **ರೂ.2.00 ಲಕ್ಷಗಳನ್ನು (ಪಿ-0311)** ಮೀಸಲಿರಿಸಲಾಗಿದ್ದು ಹಾಗೂ ದಿನಾಂಕ:17-01-2011 ರಂದು **ಜಾಬ್ ಸಂಕೇತ 127-11-000019** ನೀಡಲಾಗಿರುತ್ತದೆ ಹಾಗೂ ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ)ರವರು ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ.ಕಾಪಾಅ(ಯೋ-ದ)/ಆಮ/05/2010-11, ದಿನಾಂಕ:14-03-2011 ಮತ್ತು ತಾಂತ್ರಿಕ ಮಂಜೂರಾತಿ ಸಂಖ್ಯೆ.ಕಾಪಾಅ(ಯೋ-ದ)

ಮುಂದುವರೆದಿದೆ. . . .

ತಾಮ/06/2011-12, ದಿನಾಂಕ:14-03-2011 ನೀಡಿದ್ದು, ಸದರಿ ಕಛೇರಿಯಿಂದಲೇ ಕರಡು ಟೆಂಡರ್ ಶೆಡ್ಯೂಲ್-ಬಿ ಗೆ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಕಾಮಗಾರಿಯನ್ನು ನಿರ್ವಹಿಸಲು ಕೆಲಸದ ಆದೇಶ ಸಂಖ್ಯೆ.ಕಾಪಾಅ(ಯೋ-ದ)ಕೆಆ/34/2011-12, ದಿನಾಂಕ: 02-08-2011 ರಂದು ನೀಡಿ ಗುತ್ತಿಗೆ ಒಡಂಬಡಿಕೆಯನ್ನು ಸಹ ಮಾಡಿಕೊಂಡಿರುತ್ತಾರೆ. ಆದ್ದರಿಂದ ಮೇಲ್ಕಂಡ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಬೆಂಗಳೂರು ಸಂಸ್ಥೆಯಿಂದ ನಿರ್ವಹಿಸಿರುವುದನ್ನು ಸ್ಥಿರೀಕರಣ ಕೋರಿ ಸದರಿ ಕಾಮಗಾರಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 04-12-2012 ರ ಟಿಪ್ಪಣಿ.

| Sl. No. | Name of the Work | Est. Cost Rs. in Lakshs |
|---|---|---|
| 01 | Repairs and painting to fencing pathway to park in Ward No.127 | 2.00 |

**<u>ನಿರ್ಣಯ</u> :- ದಿನಾಂಕ:04-12-2012 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**5. ವಿಷಯ ಸಂಖ್ಯೆ:ತೋ/ಸ್ಥಾ/ಸ/30/12-13, ದಿನಾಂಕ:11-12-2012**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ವ್ಯಾಪ್ತಿಗೆ ಬರುವ ಎಂಟು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ, ಮಹದೇವಪುರ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿನಗರ ವಲಯಗಳಲ್ಲಿ 2012-13ನೇ ಸಾಲಿನ ಅರಣ್ಯೀಕರಣ ಕಾಮಗಾರಿಗಳಾದ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಒಂದು ಮತ್ತು ಎರಡನೇ ಸಾಲಿನ ಹಳೆಯ ನೆಡುತೋಪು ನಿರ್ವಹಣೆ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ನಿರ್ವಹಿಸುವ ಮತ್ತು ಮುಂದಿನ ಸಾಲಿಗೆ ಸಸಿಗಳನ್ನು ಬೆಳೆಸಿ ಪೋಷಿಸುವ ಕಾಮಗಾರಿ ಹಾಗೂ ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು 3296.00 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅರಣ್ಯ ಘಟಕದ ವತಿಯಿಂದ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚ ರೂ.3413.35 ಲಕ್ಷಗಳಾಗಲಿದ್ದು, ಕ್ರಿಯಾ ಯೋಜನೆಯ ಕಾಮಗಾರಿಗಳ ನಿರ್ವಹಣೆಯಲ್ಲಿ ಆರ್ಥಿಕ ಅನುದಾನ ರೂ.3296.00 ಲಕ್ಷಗಳಿಗೆ ಮಿತಗೊಳಿಸಿ ಅನುಮೋದಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸುತ್ತಾ ಕ್ರಿಯಾ ಯೋಜನೆಯನ್ನು ಮಂಜೂರು ಮಾಡಲು ಹಾಗೂ ಕ್ರಿಯಾ ಯೋಜನೆ ವ್ಯಾಪ್ತಿಯಲ್ಲಿ ಪ್ರತಿ

ಮುಂದುವರೆದಿದೆ. . . .

ಕಾಮಗಾರಿಗೆ ಕಾಮಗಾರಿ ಸಂಕೇತವನ್ನು ಪಡೆಯಲು ಅನುಮತಿ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:30–11–2012 ರ ಟಿಪ್ಪಣಿ.

**<u>ನಿರ್ಣಯ :–</u> ದಿನಾಂಕ:30–11–2012 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಿ ಕಾರ್ಯಪ್ರವೃತ್ತರಾಗಬೇಕೆಂದು, ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಂದುವರೆದಿದೆ. . . .